# ಹಿಂದೂ ಧರ್ಮದಲ್ಲಿನ ಕೃತಿಗಳಿಂದ ಸಾತ್ತ್ವಿಕರೂ ನಿರ್ಭಯರಾಗಿ ಧರ್ಮರಕ್ಷಣೆಗಾಗಿ ಸಿದ್ಧರಾಗಿರಿ !



## ಹಿಂದೂ ಧರ್ಮಜಾಗೃತಿ ಸಭೆಯ ಪ್ರಸಾರವನ್ನು ಹೇಗೆ ಮಾಡಬೇಕು ?



### ಸಮಾಜದ ವಿವಿಧ ಘಟಕಗಳನ್ನು ಹೇಗೆ ಸಂಪರ್ಕಿಸಬಹುದು ?

ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ದೇಶದೆಲ್ಲೆಡೆ 'ಹಿಂದೂ ಧರ್ಮಜಾಗೃತಿ ಸಭೆ'ಗಳನ್ನು ಆಯೋಜಿಸಲಾಗುತ್ತಿದೆ. ಇದಕ್ಕಾಗಿ ಸಮಿತಿಯ ಕಾರ್ಯಕರ್ತರು ಸಮಾಜದಲ್ಲಿನ ಜನರನ್ನು ಭೇಟಿಯಾಗುತ್ತಾರೆ ಮತ್ತು ಅವರಿಗೆ ಧರ್ಮಜಾಗೃತಿ ಸಭೆಯ ಮಹತ್ವವನ್ನು ಹೇಳುವುದರೊಂದಿಗೆ ಹಿಂದೂ ಸಂಘಟನೆ ಮತ್ತು ಧರ್ಮಜಾಗೃತಿಯ ವಿಷಯದಲ್ಲಿ ಪ್ರಬೋಧನೆಯನ್ನೂ ಮಾಡುತ್ತಾರೆ. ಸಮಾಜದಲ್ಲಿನ ಜನರನ್ನು ಸಂಪರ್ಕಿಸುವಾಗ ಸಮಿತಿಯ ಕಾರ್ಯಕರ್ತರಿಗೆ ಮಾರ್ಗದರ್ಶನ ಸಿಗಲಿ ಎಂದು ಕೆಲವು ಮಾಹಿತಿಗಳನ್ನು ಈ ಲೇಖನದಲ್ಲಿ ನೀಡಲಾಗಿದೆ.

**ಸಂಕಲನ : ಶ್ರೀ. ವಿನಯ ವಸಂತ ಪಾನವಳಕರ, ದೇವರೂಖ, ರತ್ನಾಗಿರಿ.**

### ಧರ್ಮಸಭೆಯ ಪ್ರಸಾರಕ್ಕೆ ಹೋಗುವಾಗ ಕೆಳಗಿನ ತಾತ್ತ್ವಿಕ ಮಾಹಿತಿಯು ತಿಳಿದಿರಲಿ !

**ಅ. ಇತರ ಧರ್ಮೀಯರಲ್ಲಿನ ಐಕ್ಯತೆ ಮತ್ತು ಪ್ರತಿಕಾರ ಕ್ಷಮತೆಯಿರಲು ಧರ್ಮಾಚರಣೆಯೇ ಕಾರಣವಾಗಿದೆ ! :** ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಸಿಗಲೆಂದು ಹಿಂದುತ್ವವಾದಿ ವಿಚಾರಸರಣಿಯ ಪಕ್ಷ ಮತ್ತು ಸಂಘಟನೆಗಳು ಕಾರ್ಯನಿರತವಾಗಿದ್ದವು. ಸ್ವಾತಂತ್ರ್ಯದ ನಂತರದ ೬೧ ವರ್ಷಗಳ ಕಾಲ 'ಭಾರತವು ಹಿಂದೂ ರಾಷ್ಟ್ರವಾಗಬೇಕು, ಇಲ್ಲಿನ ಹಿಂದೂಗಳು ಸಂಘಟಿತರಾಗಬೇಕು, ಹಿಂದೂಗಳು ಜಾಗೃತರಾಗಬೇಕು, ಅವರಲ್ಲಿ ತಮ್ಮ ಹಕ್ಕಿನ ಬಗ್ಗೆ ಅರಿವು ಮೂಡಬೇಕು, ಅತ್ಯಾಚಾರದ ಪ್ರಸಂಗಗಳು ಬಂದರೆ ಪ್ರತಿಕಾರ ಮಾಡಬೇಕು' ಎಂಬುದಕ್ಕಾಗಿ ಹಿಂದುತ್ವವಾದಿ ಸಂಘಟನೆಗಳು ಮತ್ತು ಪಕ್ಷಗಳು ಪ್ರಯತ್ನಿಸಿದವು; ಆದರೆ ಅವರಿಗೆ ಅದರಲ್ಲಿ ಇಂದಿಗೂ ಅಪೇಕ್ಷಿತವಾದಂತಹ ಯಶಸ್ಸು ಸಿಕ್ಕಿಲ್ಲ. ಇದರ ಹಿಂದಿನ ಕಾರಣವನ್ನು ನಾವು ಹುಡುಕಬೇಕಾಗಿದೆ. ಮುಸಲ್ಮಾನ ಅಥವಾ ಕ್ರೈಸ್ತ ಪಂಥಗಳಲ್ಲಿ ಐಕ್ಯತೆಯು ಕಾಣಿಸುತ್ತದೆ. ಇದು ಯಾವುದೇ ಪಕ್ಷ ಅಥವಾ ಸಂಘಟನೆಯಿಂದಲ್ಲದೇ ಕೇವಲ ಅವರ ಧರ್ಮದಿಂದಲೇ ಸಾಧ್ಯವಾಗಿದೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಇತರ ಪಂಥೀಯರು ಧರ್ಮದ ಮೇಲೆ ದೃಢನಿಷ್ಠೆಯನ್ನಿಟ್ಟು ಧರ್ಮಾಚರಣೆಯನ್ನು ಮಾಡುತ್ತಾರೆ. ಇದರಿಂದ ಅವರೊಳಗೆ ಧರ್ಮಾಭಿಮಾನವಿದೆ ಹಾಗೂ ಇದುವೇ ಅವರ ಒಗ್ಗಟ್ಟಿಗೆ ಮತ್ತು ಪ್ರತಿಕಾರ ಕ್ಷಮತೆಯ ಮರ್ಮವಾಗಿದೆ ಎಂಬುದು ತಿಳಿಯುತ್ತದೆ.

**ಆ. ಹಿಂದೂಗಳೆಲ್ಲರನ್ನು ಧರ್ಮಾಭಿಮಾನಿಗಳನ್ನಾಗಿಸಿರಿ ! :** ಹಿಂದುತ್ವವಾದಿ ಸಂಘಟನೆ ಅಥವಾ ಪಕ್ಷಗಳು ತಮ್ಮ ಹೆಸರಿನಡಿಯಲ್ಲಿ ಕಾರ್ಯ ಅಥವಾ ಸಹಾಯವನ್ನು ಮಾಡಿದರು. ಇಂದು ಹಿಂದೂಗಳಲ್ಲಿ ಬಾಹ್ಯ ಧರ್ಮಾಚರಣೆಯ ವೈಭವೀಕರಣವು ಕಾಣಿಸುತ್ತಿದೆ; ಆದರೆ ಅದರಲ್ಲಿನ ಧರ್ಮಶಾಸ್ತ್ರದ ಬಗ್ಗೆ ಅವರಿಗೆ ಘೋರ ಅಜ್ಞಾನವಿದೆ. ಇದರಿಂದ ಹಿಂದೂಗಳಿಗೆ ಧಾರ್ಮಿಕ ಕೃತಿಯಿಂದ ಅಪೇಕ್ಷಿತ ಮಟ್ಟದಲ್ಲಿ ಆಧ್ಯಾತ್ಮಿಕ ಬಲವು ಸಿಗುತ್ತಿಲ್ಲ. ಇದರಿಂದಲೇ ಹಿಂದೂಗಳು ಮಾನಸಿಕವಾಗಿ ದುರ್ಬಲರಾಗಿದ್ದಾರೆ. ಅವರಲ್ಲಿ ಐಕ್ಯತೆ ಮತ್ತು ಪ್ರತಿಕಾರ ಕ್ಷಮತೆಯು ಇಲ್ಲವಾಗಿದೆ. ಇಂದಿಗೂ ಹಿಂದೂಗಳು ಧಾರ್ಮಿಕ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಂದಾಗುತ್ತಾರೆ. ಇದು ಜಾತ್ರೆ, ಕುಂಭಮೇಳ ಮತ್ತು ಸಾರ್ವಜನಿಕ ಧಾರ್ಮಿಕ ಉತ್ಸವಗಳಲ್ಲಿನ ಜನದಟ್ಟಣೆಯಿಂದ ಗಮನಕ್ಕೆ ಬರುತ್ತದೆ. ಹಿಂದೂ ಸಂಘಟನೆ ಅಥವಾ ಪಕ್ಷಗಳು, ಹಿಂದೂಗಳು ಈ ಸಮಯದಲ್ಲಿ ಒಟ್ಟು ಸೇರುವುದರ ಲಾಭ ಪಡೆದು 'ಧರ್ಮಾಚರಣೆ ಮತ್ತು ಧರ್ಮರಕ್ಷಣೆ'ಯ ವಿಷಯದ ಬಗ್ಗೆ ತಿಳಿಸಿ ಹೇಳಿ ಎಲ್ಲ ಹಿಂದೂಗಳನ್ನು ಧರ್ಮಾಭಿಮಾನಿಗಳನ್ನಾಗಿಸಬೇಕು.

**ಇ. ಧರ್ಮಾಭಿಮಾನದ ಅಭಾವದಿಂದಾಗಿ ಹಿಂದೂಗಳಿಗೆ ಧರ್ಮದ ಮೇಲಾಗುತ್ತಿರುವ ಆಘಾತಗಳನ್ನು ಎದುರಿಸುವುದು ಕಷ್ಟಕರವಾಗಿದೆ ! :** ೮೫ ಕೋಟಿಯಷ್ಟು ಹಿಂದೂಗಳಿರುವ ಈ ದೇಶದಲ್ಲಿ ಅಲ್ಪಸಂಖ್ಯಾತರು ಇಷ್ಟು ಉದ್ಧಟತನದಿಂದ ಹೇಗೆ ವರ್ತಿಸಬಹುದು ? ಅವರಲ್ಲಿ ಇಷ್ಟು ಬಲ ಎಲ್ಲಿಂದ ಸಿಗುತ್ತದೆ ? ಎಂಬುದನ್ನು ಅವಲೋಕಿಸಿದಾಗ ಇದೆಲ್ಲದಕ್ಕೆ ಧರ್ಮಶಿಕ್ಷಣ ಮತ್ತು ಧರ್ಮಾಚರಣೆಯೇ ಕಾರಣವಾಗಿದೆ ಎಂಬುದು ತಿಳಿಯುತ್ತದೆ. ಧರ್ಮವೇ ವ್ಯಕ್ತಿಯನ್ನು ಸಮರ್ಥ ಹಾಗೂ ನಿರ್ಭಯನನ್ನಾಗಿಸುತ್ತದೆ ಹಾಗೂ ಸಮಾಜವನ್ನು ಸಂಘಟಿಸುತ್ತದೆ. ಯಾವುದಾದರೊಂದು ಪಕ್ಷ ಅಥವಾ ಸಂಘಟನೆಯು ಸಂಪೂರ್ಣ ಸಮಾಜವನ್ನು ಸಂಘಟಿಸಲು ಎಂದೂ ಸಾಧ್ಯವಿಲ್ಲ ಎಂಬುದನ್ನು ಅಲ್ಪಸಂಖ್ಯಾತರು ಸಿದ್ಧಪಡಿಸಿದ್ದಾರೆ. ಧರ್ಮಶಕ್ತಿಯ ಅಭಾವದಿಂದಲೇ ಇಂದು ಹಿಂದೂಗಳು ನಿಸ್ತೇಜ ಮತ್ತು ಶವಸಮಾನವಾಗಿದ್ದಾರೆ. ಧರ್ಮರಕ್ಷಣೆಗೆ ಮಹತ್ವ ನೀಡುವ ಬದಲು ಅದರೆಡೆ ನಿರ್ಲಕ್ಷಿಸಿ ಪರಸ್ಪರ ಜಾತಿಜಾತಿಗಳಲ್ಲಾಗುವ ಕಲಹಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಹಿಂದೂಗಳಿಗೆ ಧರ್ಮಶಿಕ್ಷಣ ಮತ್ತು ಧರ್ಮಾಚರಣೆಯ ಮಹತ್ವವನ್ನು ತಿಳಿಸಿ ಹೇಳುವುದು ಅನಿವಾರ್ಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದಾಗಿ ಹಿಂದೂಗಳು ಧರ್ಮಾಭಿಮಾನವನ್ನು ಹೆಚ್ಚಿಸಿಕೊಂಡು ತಮ್ಮ ಮೇಲಾಗುತ್ತಿರುವ ಆಘಾತಗಳನ್ನು ಎದುರಿಸಬಲ್ಲರು !

**ಈ. ಹಿಂದೂ ಧರ್ಮದ ವೈಶಿಷ್ಟ್ಯ ! :** ನಮ್ಮ ಋಷಿಮುನಿಗಳು ಧರ್ಮದ ಮಹತ್ವವನ್ನು ಅರಿತುಕೊಂಡೇ ಹಿಂದೂಗಳಿಗೆ ಕರ್ಮಕಾಂಡ, ಧಾರ್ಮಿಕ ಉತ್ಸವ ಮತ್ತು ವ್ರತಗಳನ್ನು ಆಚರಿಸಲು ಹೇಳಿದ್ದಾರೆ. ನಮ್ಮ ಧರ್ಮದಲ್ಲಿನ ಪ್ರತಿಯೊಂದು ಕೃತಿಯ ಹಿಂದೆ ಶಾಸ್ತ್ರವಿದೆ. ಈ ಶಾಸ್ತ್ರವೆಂದರೆ ಈಶ್ವರೀ ಚೈತನ್ಯವನ್ನು ಪಡೆಯುವ ಪದ್ಧತಿಯಾಗಿದೆ. ಇದರಿಂದ ಸಮಾಜದ ಅಂದರೆ ವ್ಯಕ್ತಿಯ ಆತ್ಮಬಲವು ಹೆಚ್ಚಾಗುತ್ತದೆ. ಇದರಿಂದ ಅವನು ಸಾತ್ತ್ವಿಕ ಮತ್ತು ನಿರ್ಭಯನಾಗುತ್ತಾನೆ. ಅಂತಹ ವ್ಯಕ್ತಿಯು ಕೇವಲ ಹಿಂದೂ ಧರ್ಮವನ್ನಲ್ಲದೇ ಸಂಪೂರ್ಣ ವಿಶ್ವದ ರಕ್ಷಣೆಯನ್ನೂ ಮಾಡಲು ಸಮರ್ಥನಾಗುತ್ತಾನೆ. ಇದುವೇ ಹಿಂದೂ ಧರ್ಮದ ವೈಶಿಷ್ಟ್ಯವಾಗಿದೆ.

### ವೈಯಕ್ತಿಕ ಸಂಪರ್ಕದ ಸಮಯದಲ್ಲಿ ಗಮನದಲ್ಲಿರಿಸಬೇಕಾದ ಪ್ರಾಯೋಗಿಕ ಅಂಶಗಳು

ವೈಯಕ್ತಿಕ ಅಥವಾ ಸಂಘಟನೆಯವರನ್ನು ಭೇಟಿಯಾಗಲು ಹೋಗುವಾಗ ಅವರೆದುರು ಯಾವ ವಿಷಯವನ್ನು ಮಂಡಿಸುವುದಿದೆ ಎಂಬುದನ್ನು ಮೊದಲೇ ನಿರ್ಧರಿಸಿರಬೇಕು. ಅಪರಿಚಿತ ವ್ಯಕ್ತಿಯನ್ನು ಭೇಟಿಯಾಗುವುದಿದ್ದಲ್ಲಿ ಮೊದಲಿಗೆ ನಮ್ಮ ಪರಿಚಯ ಮತ್ತು ಭೇಟಿಯ ಕಾರಣವನ್ನು ಹೇಳಬೇಕು. ಸದ್ಯದ ಸ್ಥಿತಿಯ ಬಗ್ಗೆ ಕೆಲವು ಪ್ರಶ್ನೆಗಳನ್ನು ವಿಚಾರಿಸಿ ಅಥವಾ ಸಂಬಂಧಿಸಿದ ವಿಷಯದ ಕೆಲವು ಅಂಶಗಳನ್ನು ಮುಂದಿಟ್ಟು ಮಾತನ್ನು ಪ್ರಾರಂಭಿಸಬೇಕು. ಎದುರಿಗಿನ ವ್ಯಕ್ತಿಯ ಮಾತಿನಲ್ಲಿನ ಅಂಶ ಅಥವಾ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ನಮ್ಮ ವಿಷಯದ ಚರ್ಚೆಯನ್ನು ಜೋಡಿಸಬೇಕು ಮತ್ತು ನಾವು ನಿಶ್ಚಯಿಸಿದ ವಿಷಯಗಳನ್ನು ಹೇಳಬೇಕು. ಎಲ್ಲಕ್ಕಿಂತ ಮಹತ್ವದ್ದೇನೆಂದರೆ ಯಾವುದೇ ಚರ್ಚೆಯನ್ನು ನಮ್ಮ ವಿಷಯಕ್ಕೆ ತಂದು ನಿಲ್ಲಿಸಬೇಕು. ಅವರಿಗೆ ಬೇಕಾದಂತಹ ವಿಷಯದಲ್ಲಿ ಮಾತನಾಡುತ್ತಿರುವುದು ಸಂಪರ್ಕದ ಉದ್ದೇಶವಾಗಿರಬಾರದು. ಕೇವಲ ಮಾತಾನಾಡುತ್ತಿರುವುದೆಂದರೆ ಆತ್ಮೀಯತೆಯಲ್ಲ. ಅವರ ವಿಷಯದಲ್ಲಿನ ಸಾರವನ್ನು ಪಡೆದುಕೊಂಡು ನಾವೂ ಆ ಸಂದರ್ಭದಲ್ಲಿ ಏನು ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂಬುದನ್ನು ಹೇಳಿ ವಿಷಯವನ್ನು ಮುಂದುವರಿಸಬೇಕು. ವಿಷಯ ತಿಳಿಯಲು ಸುಲಭವಾಗಲೆಂದು ಕೆಳಗೆ ಕೆಲವು ಉದಾಹರಣೆಯನ್ನು ನೀಡುತ್ತಿದ್ದೇನೆ.

**ಅ. ತಾಲೂಕು / ಜಿಲ್ಲಾ ಸಂಘಟಕರು, ಮಹಾಪುರುಷರ (*) ಆಶ್ರಮದವರನ್ನು ಸಂಪರ್ಕಿಸಿದಾಗ ನನಗೆ ಬಂದ ಅನುಭವಗಳು**

ನಾನು ಭೇಟಿ ನೀಡಿದ ಒಂದು ಆಶ್ರಮದ ಕಾರ್ಯದ ಬಗ್ಗೆ ನನಗೆ ಮೊದಲೇ ಮಾಹಿತಿಯಿದ್ದುದರಿಂದ ಸದ್ಯ ಅವರು ಯಾವ ಕಾರ್ಯವನ್ನು ಮಾಡುತ್ತಿದ್ದಾರೆ ಎಂಬುದನ್ನು ವಿಚಾರಿಸಿಕೊಂಡೆನು. ಅವರು ವಿವಿಧ ಸಮಾಜೋಪಯೋಗಿ ಕಾರ್ಯದ ಬಗ್ಗೆ ಉಲ್ಲೇಖಿಸಿದರು. ಅವರ ಕಾರ್ಯದ ಬಗ್ಗೆ ಅಗತ್ಯವಿದ್ದಷ್ಟೇ ಸ್ತುತಿಸಿ ಕೆಲವು ಪ್ರಶ್ನೆಗಳನ್ನು ವಿಚಾರಿಸಿದೆನು.

* ಅವರು ವಿದೇಶಕ್ಕೆ ಯಾತಕ್ಕೆ ಹೋಗಿದ್ದರು ?

* ಅವರು ಜೀವನವಿಡೀ ಯಾವ ಕಾರ್ಯವನ್ನು ಮಾಡಿದ್ದರು ?

* ಅವರು ಹಿಂದೂಗಳ ಬಗ್ಗೆ ಯಾವ ಧೋರಣೆಯನ್ನು ಇಟ್ಟುಕೊಂಡಿದ್ದರು ?

* ಅವರು ಹಿಂದೂ ಧರ್ಮವನ್ನು ನಿಂದಿಸುವವರ ಬಗ್ಗೆ ಯಾವ ಧೋರಣೆಯನ್ನು ಇಟ್ಟುಕೊಂಡಿದ್ದರು ?

* ಅವರ ಕಾಲದಲ್ಲಿ ಅವರಿಗೆ ಧರ್ಮದ ಬಗ್ಗೆ ಬಹಳ ಅಭಿಮಾನವಿತ್ತು ಮತ್ತು ಮಹತ್ವವೆನಿಸುತ್ತಿತ್ತು, ಇಂದಿಗೂ ನಾವು ಇದೇ ಕಾರ್ಯವನ್ನು ಮಾಡುವುದು ಅವಶ್ಯಕವಾಗಿದೆ ಎಂದು ನಿಮಗೆ ಅನಿಸುವುದಿಲ್ಲವೇನು ? ಅದಕ್ಕಾಗಿ ನಾವು ಒಟ್ಟಾದರೆ ಹಿಂದೂಗಳಿಗೆ ಧರ್ಮದ ಬಗ್ಗೆಯಿರುವ ಅಜ್ಞಾನವು ದೂರವಾಗಿ * ರವರಿಗೆ ಅಪೇಕ್ಷಿತವಾದಂತಹ ಸಮರ್ಥ ಹಿಂದೂ ಸಮಾಜವು ನಿರ್ಮಾಣವಾಗಬಹುದು.

**ಪ್ರಶ್ನೆ :** * ರವರ ಆಶ್ರಮದ ವತಿಯಿಂದ ಮುಖ್ಯವಾಗಿ ಯಾವ ಕಾರ್ಯಗಳನ್ನು ಮಾಡಲಾಗುತ್ತದೆ ?

**ಉತ್ತರ :** ನಮ್ಮ ಆಶ್ರಮದ ವತಿಯಿಂದ * ರವರು ರಚಿಸಿದಂತಹ ಮಹಾನ ವಿಚಾರಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತದೆ; ಇದರಿಂದ ಮಕ್ಕಳಲ್ಲಿ * ರವರ ಗುಣಗಳು ನಿರ್ಮಾಣವಾಗಬಹುದು.

'ತಾವು ಕಳೆದ ೧೦ ವರ್ಷಗಳಿಂದ ಈ ಕಾರ್ಯವನ್ನು ಮಾಡುತ್ತಿದ್ದೀರಿ. ಎಷ್ಟು ವಿದ್ಯಾರ್ಥಿಗಳಲ್ಲಿ * ರವರ ಗುಣಗಳು ಬಂದವು ಎಂಬುದರ ಪರೀಕ್ಷಣೆಯನ್ನು ಮಾಡಿದ್ದೀರಾ ? ಅವರು * ರಿಗೆ ಎಷ್ಟು ಹತ್ತಿರ ಹೋಗಿದ್ದಾರೆ ಎಂದೆನಿಸುತ್ತದೆ ? ಒಬ್ಬರಾದರೂ * ರಂತೆ ಆಗಿದ್ದಾರೇನು ? ಸ್ವತಃ * ರವರು ಯಾವ ಪುಸ್ತಕವನ್ನು ಅಧ್ಯಯನ ಮಾಡಿ ಮಹಾನ ವ್ಯಕ್ತಿಗಳಾದರು ? ಇದರ ಚಿಂತನೆಯನ್ನು ಮಾಡಿದ್ದೀರೇನು ? ಎಂದು ಕೇಳಿದೆನು.

* ಅವರು ಸಂತರ ಮಾರ್ಗದರ್ಶನದಲ್ಲಿ ಸಾಧನೆಯನ್ನು ಮಾಡಿದರು. ಧರ್ಮದ ಅಧ್ಯಯನವನ್ನು ಮಾಡಿದರು ಮತ್ತು ಮುಂದೆ ಧರ್ಮಪ್ರಸಾರವನ್ನು ಮಾಡಿದರು. ಗುರುಕೃಪೆಯಿಂದ ಅವರು 'ಮಹಾನ ವ್ಯಕ್ತಿಗಳಾದರು. ಇದಕ್ಕಾಗಿ ವೈಯಕ್ತಿಕ ಸಾಧನೆಯನ್ನು ಮಾಡುವುದು ಮಹತ್ವದ್ದಾಗಿದೆ. ಅದರ ಜೊತೆಗೆ ಧರ್ಮರಕ್ಷಣೆಗಾಗಿ ಪ್ರಯತ್ನ ಮತ್ತು ಧರ್ಮ ಪ್ರಸಾರವು ಬೇಕು. * ರವರ ಧ್ಯೇಯವನ್ನು ಮುಂದಿಟ್ಟುಕೊಂಡು ಹಿಂದೂ ಜನಜಾಗೃತಿ ಸಮಿತಿಯ ಕಾರ್ಯವು ಆರಂಭವಾಗಿದೆ ಮತ್ತು ಈ ಉದ್ದೇಶದಿಂದ ಹಿಂದೂ ಧರ್ಮಜಾಗೃತಿ ಸಭೆಯನ್ನು ಆಯೋಜಿಸಲಾಗುತ್ತಿದೆ' ಎಂದು ಹೇಳಿದೆನು.

**ಆ. ಧರ್ಮಾಭಿಮಾನಿ ಯುವಕ ಮಂಡಳಿಯ ಸಭೆ ! :** ಆರಂಭದಲ್ಲಿ ಯುವಕ ಮಂಡಳಿಯವರ ಮಾನಸಿಕತೆ ಅಥವಾ ಅವರು ಮಹತ್ವ ನೀಡುವ ವಿಷಯಗಳ ಬಗೆಗಿನ ಅಂಶಗಳನ್ನು ಮಂಡಿಸಿದೆನು ಮತ್ತು ಪ್ರಶ್ನೆಗಳನ್ನು ವಿಚಾರಿಸಿ ಅವರಿಂದ ಮಾಹಿತಿಯನ್ನು ಪಡೆದುಕೊಂಡೆನು. ಅನಂತರ ರಾಷ್ಟ್ರ ಮತ್ತು ಧರ್ಮದ ಮುಂದಿರುವ ಸಂಕಟಗಳ ಸ್ವರೂಪವೆಂದು ಕೆಲವು ಇತ್ತೀಚಿನ ಘಟನೆಗಳ ಬಗ್ಗೆ ಸವಿಸ್ತಾರವಾಗಿ ಉಲ್ಲೇಖಿಸಿದೆನು. ಇಂತಹ ಘಟನೆಗಳ ಹಿಂದೆ ಸಮಾಜದ ಮಾನಸಿಕತೆಯು ಹೇಗೆ ಕಾರಣವಾಗಿದೆ ಮತ್ತು ಅದರ ಹಿಂದಿನ ಕಾರಣವೇನು ಎಂಬುದನ್ನು ಸ್ಪಷ್ಟಪಡಿಸಿದೆನು ಹಾಗೂ ನಾನು ನಿಶ್ಚಯಿಸಿದ ವಿಷಯದೊಂದಿಗೆ ಚರ್ಚೆಯನ್ನು ಕೊನೆಗೊಳಿಸಿದೆನು.

**ಇ. ಜಿಲ್ಲಾ ಪರಿಷತ್ತಿನ ಸದಸ್ಯರೊಂದಿಗಿನ ಅನುಭವ :** ಜಿಲ್ಲಾ ಪರಿಷತ್ತಿನ ಓರ್ವ ಸದಸ್ಯರ ಮನೆಗೆ ಹೋದಾಗ ಅವರು ಬಾಲಕಾರ್ಮಿಕ ಸಮಸ್ಯೆಯ ಬಗೆಗಿನ ತರಬೇತಿ ವರ್ಗಗಳ ಬಗ್ಗೆ ಅನೇಕ ಕಡತಗಳನ್ನು ಮತ್ತು ಪುಸ್ತಕಗಳನ್ನು ತೋರಿಸಿದರು. ಮೊದಲಿಗೆ ಅವರು ತೋರಿಸಿದಂತಹ ಸಾಹಿತ್ಯಗಳನ್ನು ಸಾಧಾರಣವಾಗಿ ಓದಿದೆನು. ಅದರಲ್ಲಿನ ಅಂಶಗಳನ್ನು ತೆಗೆದುಕೊಂಡು ಚರ್ಚೆಯನ್ನು ಪ್ರಾರಂಭಿಸಿದೆನು. ಬಾಲಕಾರ್ಮಿಕ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ತಾವು ಸರಕಾರಿ ಮಾಧ್ಯಮದಿಂದ ಬಹಳಷ್ಟು ಪರಿಹಾರೋಪಾಯಗಳನ್ನು ಸೂಚಿಸಿದ್ದೀರಿ. ಬಾಲಕಾರ್ಮಿಕ ಸಮಸ್ಯೆಗೆ ಎರಡು ಮುಖ್ಯ ಕಾರಣಗಳಿರುವುದು ಗಮನಕ್ಕೆ ಬರುತ್ತದೆ. ಒಂದು ಆ ಮಕ್ಕಳ ಪಾಲಕರು ಮತ್ತು ಇನ್ನೊಂದು ಅವರಿಂದ ಕೆಲಸ ಮಾಡಿಸಿಕೊಳ್ಳುವವರು. ಮೊದಲನೆ ಘಟಕವು ಆರ್ಥಿಕ ಅಡಚಣೆಯಿಂದ ಅಥವಾ ಮಕ್ಕಳ ಭವಿಷ್ಯದ ಮಹತ್ವವು ಗಮನಕ್ಕೆ ಬಾರದಿರುವುದರಿಂದ ಪಾಲಕರಿಗೆ ಮಕ್ಕಳ ಶಿಕ್ಷಣಕ್ಕಿಂತ ಹಣಗಳಿಸುವುದು ಮಹತ್ವದ್ದಾಗಿದೆ ಎಂದು ಅನಿಸುತ್ತದೆ. ಇನ್ನೊಂದು ಘಟಕಕ್ಕೆ ಕಡಿಮೆ ಕೂಲಿಗೆ ಕೆಲಸದವರು ಸಿಗುವುದರಿಂದ ಅವರಿಗೆ ಆರ್ಥಿಕ ಲಾಭವಾಗುತ್ತದೆ. ಸ್ವಾರ್ಥದಿಂದ ಅವರು ಮಕ್ಕಳ ಭವಿಷ್ಯದ ಬಗ್ಗೆ ವಿಚಾರ ಮಾಡುವುದಿಲ್ಲ. ಇದರಲ್ಲಿ ಎರಡೂ ಘಟಕಗಳ ಮಾನಸಿಕತೆಯಲ್ಲಿರುವಂತಹ ದೋಷವನ್ನು ದೂರ ಮಾಡುವುದು ಮಹತ್ವದ್ದಾಗಿದೆ. ಬಾಹ್ಯ ಪರಿಸ್ಥಿತಿಯನ್ನು ಎಷ್ಟೇ ಬದಲಾಯಿಸಿದರೂ ಎಲ್ಲಿಯವರೆಗೆ ಮಾನಸಿಕತೆಯು ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಬಾಲಕರನ್ನು ಕೆಲಸದ ದೃಷ್ಟಿಯಿಂದ ನೋಡುವುದು ನಿಲ್ಲುವುದಿಲ್ಲ. ಇದಕ್ಕಾಗಿ ಸಮಾಜದಲ್ಲಿನ ಜನರಿಗೆ ಸಂಸ್ಕಾರದ ಅವಶ್ಯಕತೆಯಿದೆ. ನಮ್ಮ ಧರ್ಮದಿಂದ ಇಂತಹ ಸಂಸ್ಕಾರಗಳನ್ನು ಮೂಡಿಸಬಹುದು. ಆದುದರಿಂದ ಸಮಾಜಕ್ಕೆ ಧರ್ಮಶಿಕ್ಷಣವು ಅಗತ್ಯವಾಗಿದೆ. ಸಮಾಜವು ಧರ್ಮಾಚರಣಿಯಾದರೆ, ಜನರಿಗೆ ಯೋಗ್ಯ ಅಯೋಗ್ಯಗಳ ಅರಿವಾಗುತ್ತದೆ ಅಥವಾ ಬೇರೆಯವರ ಮಾತನ್ನು ಕೇಳಲು ಸಿದ್ಧರಾಗುತ್ತಾರೆ. ಇದಕ್ಕಾಗಿ ಹಿಂದೂ ಜನಜಾಗೃತಿ ಸಮಿತಿಯ ಮಾಧ್ಯಮದಿಂದ ಸದ್ಯ ಧರ್ಮಜಾಗೃತಿ ಸಭೆಯನ್ನು ಆಯೋಜಿಲಾಗಿದೆ.

### ಸಂಪರ್ಕಕ್ಕಾಗಿ ಮುಂದಿನ ಸಂಘಟನೆಗಳನ್ನು ಅಥವಾ ಸಂಸ್ಥೆಗಳನ್ನು ಭೇಟಿಯಾಗಿರಿ !

**ಅ. ಹಿಂದುತ್ವವಾದಿ ಸಂಘಟನೆಗಳ ಪದಾಧಿಕಾರಿಗಳು**

೧. ರಾಷ್ಟ್ರೀಯ ಸ್ವಯಂಸೇವಕ ಸಂಘ

೨. ವಿಶ್ವ ಹಿಂದೂ ಪರಿಷತ್ತು

೩. ಬಜರಂಗ ದಳ

೪. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು

೫. ಭಾರತೀಯ ವಿದ್ಯಾರ್ಥಿ ಸೇನೆ

**ಆ. ಧಾರ್ಮಿಕ ಮಂಡಳಿಯ ವಿಶ್ವಸ್ಥರು, ಸಂಚಾಲಕರು ಮತ್ತು ಸದಸ್ಯರು**

೧. ವಿವಿಧ ದೇವಸ್ಥಾನಗಳು

೨. ಧಾರ್ಮಿಕ ಯುವಕರ ಮಂಡಳಿಗಳು

೩. ಸ್ವಾಮಿ ವಿವೇಕಾನಂದ ಆಶ್ರಮ

೪. ರಾಮಕೃಷ್ಣ ಮಿಶನ್ನಿನ ವ್ಯವಸ್ಥಾಪಕರು

**ಇ. ಜನಪ್ರತಿನಿಧಿಗಳು**

೧. ಹಾಲಿ-ಮಾಜಿ ಶಾಸಕರು, ಸಚಿವರು

೨. ನಗರಸೇವಕರು

೩. ಜಿಲ್ಲಾಪರಿಷತ್ತು ಮತ್ತು ಪಂಚಾಯತ ಸಮಿತಿಯ ಸದಸ್ಯರು

೪. ಎಲ್ಲ ರಾಜಕೀಯ ಪಕ್ಷಗಳ ಜಿಲ್ಲೆ ಮತ್ತು ತಾಲೂಕು ಅಧ್ಯಕ್ಷರು

(೪ ನೇ ಪುಟಕ್ಕೆ)